79

<u>ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ಇವರ ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಲಾಗಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ:</u>

**ವಿಷಯ:**

ಯುಯುಸಿಎಂಎಸ್ ತಂತ್ರಾಂಶ ಬಳಕೆ ಯಲ್ಲಿನ ನಿರ್ವಹಣಾ ವೈಫಲ್ಯದಿಂದಾಗಿ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಕಂಡುಬರುತ್ತಿರುವ ತಾಂತ್ರಿಕ ಸಮಸ್ಯೆಗಳು ಮತ್ತು ತಂತ್ರಾಂಶ ನಿರ್ವಹಣೆಯಲ್ಲಿ ಗೊಂದಲದಿಂದಾಗಿ ವಿದ್ಯಾರ್ಥಿಗಳ ಭವಿಷ್ಯ ಡೋಲಾಯಮಾನವಾಗಿರುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ರಾಜ್ಯದಲ್ಲಿ ಒಟ್ಟು 75 ವಿಶ್ವವಿದ್ಯಾಲಯಗಳಿದ್ದು, ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ 32 ಸಾರ್ವಜನಿಕ ವಿಶ್ವವಿದ್ಯಾಲಯಗಳಿವೆ. ಎಲ್ಲಾ ವಿಶ್ವವಿದ್ಯಾಲಯಗಳಿಂದ, ಸುಮಾರು ೧೬ ಲಕ್ಷ ವಿದ್ಯಾರ್ಥಿಗಳು 3,600 ಕ್ಕೂ ಹೆಚ್ಚು ಕಾಲೇಜುಗಳಲ್ಲಿ ಉನ್ನತ ವ್ಯಾಸಂಗ ಪಡೆಯುತ್ತಿದ್ದಾರೆ. ಸದರಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ದತ್ತಾಂಶ ಕ್ರೋಢೀಕರಣ ಜೊತೆಗೆ ಆಡಳಿತ, ಆಯವ್ಯಯ, ವಿದ್ಯಾರ್ಥಿಗಳಿಗೆ ಸವಲತ್ತು, ಸಂಯೋಜನೆಯ ನವೀಕರಣ, ಶೈಕ್ಷಣಿಕ, ಪರೀಕ್ಷಾ ವಿಚಾರ , ಇತ್ಯಾದಿ.. ಗಳನ್ನು ಸಮರ್ಪಕವಾಗಿ ನಡೆಸಲು ಸೂಕ್ತ ಆದುನಿಕ ತಂತ್ರಾಂಶದ ಕೊರತೆಯಿದೆ.

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿರುವ ಪ್ರತ್ಯೇಕ ಅಂಗಗಳಾಗಿ ಕಾರ್ಯ ನಿರ್ವಹಿಸುತ್ತಿರುವ ತಂತ್ರಾಂಶಗಳನ್ನು ಹಾಗೂ ಹೊರ ರಾಜ್ಯಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ತಂತ್ರಾಂಶ ವ್ಯವಸ್ಥೆಯನ್ನುಅಧ್ಯಯನ ಮಾಡಿ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಗೆ ಅನುಕೂಲವಾಗುವ ಹಾಗೆ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ(UUCMS [Unified University & College Management System])ಯ ರೂಪುರೇಷೆಗಳ ಬಗ್ಗೆ ವರದಿ ಸಲ್ಲಿಸಲು, ಅನೇಕ ಕುಲಪತಿಗಳನ್ನೊಳಗೊಂಡ Task Force ಸಮಿತಿಯನ್ನು ರಚಿಸಲಾಗಿತ್ತು.

ಸಮಿತಿಯು ಸಲ್ಲಿಸಿರುವ ವರದಿಯಲ್ಲಿ, ಉನ್ನತ ಶಿಕ್ಷಣ ಇಲಾಖೆಯಡಿಯ ಎಲ್ಲಾ ವಿಶ್ವವಿದ್ಯಾಲಯಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆಗಳಡಿಯಲ್ಲಿ ಬರುವ ಕಾಲೇಜುಗಳಲ್ಲಿ ಪ್ರವೇಶಾತಿ, ಶೈಕಣಿಕ, ಆಡಳಿತ, ಪರೀಕ್ಷಾ ಕಾರ್ಯ, ಮಾನವ ಸಂಪನ್ಮೂಲ ನಿರ್ವಹಣೆ ಮುಂತಾದವುಗಳನ್ನು, ನಿರ್ವಹಿಸಲು, ಆಡಳಿತದಲ್ಲಿ ಕಾರ್ಯದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು, ವಿದ್ಯಾರ್ಥಿಗಳಿಗೆ ಪ್ರವೇಶಾತಿ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಸುಲಭ ಮತ್ತು ಸ್ನೇಹಪರತೆ ಹೆಚ್ಚಿಸಲು, ಸಮಗ್ರ ತಂತ್ರಾಂಶದ ಅಳವಡಿಕೆ ಅವಶ್ಯಕತೆಯನ್ನು ಶಿಫಾರಸ್ಸು ಮಾಡಿರುತ್ತದೆ.

ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ತಂತ್ರಾಂಶ (Unified University & College Management System–

UUCMS)ಅನ್ನು ರಾಜ್ಯದಲ್ಲಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲು, 2020-21 ನೆ ಬಜೆಟ್‌ನ ಆಯವ್ಯಯದಲ್ಲಿ, ಈ ಕೆಳಕಂಡಂತೆ ಘೋಷಿಸಲಾಗಿತ್ತು;

*"ರಾಜ್ಯದ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಆಡಳಿತ ವ್ಯವಸ್ಥೆಯನ್ನು ತಂತ್ರಜ್ಞಾನದ ನೆರವಿನಿಂದ ಸಮರ್ಥವಾಗಿ ನಿರ್ವಹಿಸಲು ಒಂದು ಶಾಶ್ವತ ವ್ಯವಸ್ಥೆಯನ್ನು ಒಂದು ಕೋಟಿ ರೂ.ಗಳ ವೆಚ್ಚದಲ್ಲಿ ರೂಪಿಸಲಾಗುವುದು."*

ಈ ಹಿನ್ನೆಲೆಯಲ್ಲಿ, ರೂ.20 ಲಕ್ಷಗಳನ್ನು 2020-21 ರ ಆಯವ್ಯಯದಲ್ಲಿ ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಉನ್ನತ ಮಟ್ಟದ ಮಾಹಿತಿ ತಂತ್ರಜ್ಞಾನ ಸಮಿತಿ(IT Empower committee- Higher Education) ಮತ್ತು ಕಾರ್ಯನಿರ್ವಹಣಾ ಸಮಿತಿಗಳನ್ನು ರಚಿಸಿ ಆದೇಶಿಸಲಾಗಿದೆ. ಯೋಜನೆ ಕ್ರಮಬದ್ಧ ಅನುಷ್ಠಾನಕ್ಕೆ, ರಾಜ್ಯ ಮಟ್ಟದ ಯೋಜನಾ ನಿರ್ವಹಣಾ ಘಟಕ, ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಇ-ಆಡಳಿತ ಘಟಕಗಳನ್ನು ರಚಿಸಲಾಗಿದೆ.

ಸದರಿ ಯೋಜನೆಯ ಸಂಪೂರ್ಣ ವಿನ್ಯಾಸ, ಅಭಿವೃದ್ಧಿ ಮತ್ತು ಅನುಷ್ಠಾನವನ್ನು ಸರ್ಕಾರದ ಇ-ಆಡಳಿತ ಇಲಾಖೆಯಡಿಯಲ್ಲಿರುವ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್(CSG) ಗೆ ವಹಿಸಿಕೊಡಲಾಗಿದ್ದು. ಈ ಯೋಜನೆಯಡಿಯಲ್ಲಿ Admissions, Academics and Class Monitoring, Examination, Human Resources Management, Online Affiliation, Student Support System, Asset Management, Library Management, Financial Planning and Monitoring, Research and Development ಎಂಬ ಹತ್ತು ಪ್ರಮುಖ ಮಾದರಿಗಳನ್ನು ನಿರ್ಧರಿಸಲಾಗಿದೆ. ಎಲ್ಲಾ ಮಾದರಿಗಳಿಗೆ ವಿಶ್ವವಿದ್ಯಾಲಯಗಳ ಪರಿಣಿತರ ಉಪ ಸಮಿತಿಗಳನ್ನು ರಚಿಸಿ Functional Requirement Specification (FRS)ಅನ್ನು ಸಿದ್ಧಪಡಿಸಿ, ಎಲ್ಲಾ ಹಂತಗಳ ಸಮಿತಿಗಳ ಅನುಮೋದನೆ ಪಡೆದು, ಎಲ್ಲಾ ಮಾದರಿಗಳನ್ನು ಅಭಿವೃದ್ಧಿ ಪಡಿಸಿ ಅನುಷ್ಠಾನಗೊಳಿಸಲು, ಇ-ಆಡಳಿತ ಇಲಾಖೆಯಡಿಯಲ್ಲಿರುವ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್(CSG) ಗೆ ಆದೇಶ ನೀಡಲಾಗಿದೆ.

ಪ್ರಸ್ತುತ ಹತ್ತು ಮಾದರಿಗಳಲ್ಲಿ ಏಳು ಮಾದರಿಗಳು ಬಳಕೆಯಾಗುತ್ತಿವೆ.

ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯ, ಎಲ್ಲಾ ತಂತ್ರಾಂಶ ನಮೂನೆಗಳನ್ನು 2021-22ನೇ ಸಾಲಿನಿಂದಲೇ ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಡಿಯ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಬಳಕೆಗೆ ಬಿಡುಗಡೆಗೊಳಿಸಲಾಗಿದ್ದು, ಕಳೆದ ನಾಲ್ಕು ವರ್ಷಗಳಿಂದ 16 ಲಕ್ಷಕ್ಕೂ ಹೆಚ್ಚು ವಿಧ್ಯಾರ್ಥಿಗಳು ಸದರಿ ತಂತ್ರಾಂಶವನ್ನು ಬಳಸುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳ ನೋಂದಣಿ ವಿವರ ಈ ಕೆಳಕಂಡಂತಿದೆ.

| Academic Year | 1st Year | | | 2nd Year | | | 3rd Year | | | TotalIn UUCMS |
|---|---|---|---|---|---|---|---|---|---|---|
| Year/Level | UG | PG | Total | UG | PG | Total | UG | PG | Total | |
| 2021 | 470183 | 60702 | 532906 | - | - | - | - | - | - | **530885** |
| 2022 | 346792 | 42725 | 391539 | 423621 | 52234 | 475855 | - | - | - | **865372** |
| 2023 | 361345 | 48435 | 409780 | 324623 | 36785 | 361408 | 410145 | 49213 | 459358 | **1230546** |
| 2024 | 364309 | Ongoing | -- | 358347 | 46438 | 404785 | 322529 | 35787 | 358316 | |

Admissions Module ತಂತ್ರಾಂಶವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

1. ಇಡೀ ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಪ್ರವೇಶಾತಿಯು UUCMS ತಂತ್ರಾಂಶದ ಮುಖಾಂತರವೇ ನಡೆಯುವುದು.
2. UUCMS ತಂತ್ರಾಂಶದಲ್ಲಿ ಬದಲಾಗಿರುವ ಶಿಕ್ಷಣ ನೀತಿಗಳಿಗನುಗುಣವಾಗಿ ಮಾರ್ಪಾಡು ಮಾಡುತ್ತಾ ಬರಲಾಗಿದೆ.
3. ಇದು ಸಂಪೂರ್ಣ ಆನ್‌ಲೈನ್ ಸೇವೆಯಾಗಿದ್ದು, ಒಬ್ಬ ವಿದ್ಯಾರ್ಥಿ ರಾಜ್ಯ/ದೇಶದ ಯಾವುದೇ ಮೂಲೆಯಿಂದ, ಯಾವುದೇ ಸಮಯದಲ್ಲಿ, ಕರ್ನಾಟಕದ ಯಾವುದೇ ಕಾಲೇಜಿಗೆ/ಎಷ್ಟು ಕಾಲೇಜುಗಳಿಗೆ ಬೇಕಾದರೂ ಅರ್ಜಿಯನ್ನು ಹಾಕಿ, ಆಯ್ಕೆ/ಇಚ್ಛೆ ಪಟ್ಟ ಒಂದು ಕಾಲೇಜಿನಲ್ಲಿ ಪ್ರವೇಶಾತಿ ಪಡೆಯಬಹುದು.
4. ಆಯಾಯ ಕಾಲೇಜಿನವರು ತಮ್ಮ ತಮ್ಮ ಕಾಲೇಜುಗಳ ಶುಲ್ಕವನ್ನು ತಂತ್ರಾಂಶದಲ್ಲಿ ಅಳವಡಿಸಿರುತ್ತಾರೆ ಮತ್ತು Category/cast/Gender/any ವಿನಾಯಿತಿಗಳನ್ನು ಅಳವಡಿಸಬಹುದು
5. ವಿದ್ಯಾರ್ಥಿಗಳು, ಪೋರ್ಟಲ್‌ನ ಶೂನ್ಯ ಅರ್ಜಿ ಶುಲ್ಕದೊಂದಿಗೆ ಎಷ್ಟು ಬೇಕಾದರೂ ಕಾಲೇಜುಗಳಿಗೆ ಅರ್ಜಿಗಳನ್ನು ಸಲ್ಲಿಸಬಹುದು.
6. ವಿದ್ಯಾರ್ಥಿಗಳು ಪ್ರವೇಶಾತಿ ಶುಲ್ಕವನ್ನು ಆನ್‌ಲೈನ್ ಹಾಗೂ ಆಫ್ -ಲೈನ್ ಮುಖಾಂತರ ಸಹ ಪಾವತಿಸಬಹುದು.
7. ವಿದ್ಯಾರ್ಥಿಯು ತಂತ್ರಾಂಶದಲ್ಲಿ ಅಳವಡಿಸುವ ಬಹುತೇಕ ದತ್ತಾಂಶವು, ಈ ಹಿಂದಿನ ಇಲಾಖೆಯ (ಪ.ಪೂ.ಶಿ. ಇಲಾಖೆ) ಸರ್ವರ್‌ನಿಂದ ಇಂದೀಕರಿಸಲಾಗುತ್ತಿದ್ದು, ಕನಿಷ್ಟ ಮಾಹಿತಿಗಳೊಂದಿಗೆ ಅರ್ಜಿಯನ್ನು ಭರ್ತಿ ಮಾಡಿ ಪ್ರವೇಶಾತಿ ಪಡಯಬಹುದು.
8. ತಂತ್ರಾಂಶವನ್ನು ಸರ್ಕಾರದ ಇತರೆ ಇಲಾಖೆಗಳೊಂದಿಗೆ, ADHAAR, UDID, AJSK (cast/Income), NAD, Digilocker, HRMS, ಇತ್ಯಾದಿ ತಂತ್ರಾಂಶಗಳೊಂದಿಗೆ ಸಂಯೋಜಿಸಿರುವುದರಿಂದ, ಅರ್ಜಿ ಸಲ್ಲಿಸಲು ಅವಶ್ಯವಿರುವ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಅವಶ್ಯಕತೆಯಿರುವುದಿಲ್ಲ.

9. ರಾಜ್ಯದ ಸಮಗ್ರ ಕಾಲೇಜುಗಳ ಶೈಕ್ಷಣಿಕ ಕಾರ್ಯಕ್ರಮಗಳ ಮಾಹಿತಿಯು ಎಲ್ಲಾ ವಿದ್ಯಾರ್ಥಿಗೂ ಲಭ್ಯವಿರುತ್ತದೆ.
10. ಪ್ರವೇಶಾತಿ ಪಡೆದ ವಿದ್ಯಾರ್ಥಿಯ ದತ್ತಾಂಶವು, ತಂತ್ರಾಂಶದ ಇತರೆ ನಮೂನೆಗಳಿಗೆ ಸ್ವಯಂಚಾಲಿತಗೊಂಡು ಪ್ರತಿ ಹಂತದಲ್ಲೂ ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಕಾಲೇಜು/ವಿಶ್ವವಿದ್ಯಾಲಯಗಳ ಆಡಳಿತಕ್ಕೆ ನೇರವಾಗುವುದು.
11. ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ದಾಖಲಾದ ವಿದ್ಯಾರ್ಥಿಗಳ, ಶೈಕ್ಷಣಿಕ ಪ್ರಗತಿಯನ್ನುಕಾಲಕಾಲಕ್ಕೆಸ್ವಯಂ, ವಿದ್ಯಾರ್ಥಿಗಳು/ಪೋಷಕರು ಗಮನಿಸಬಹುದು.
12. ಸದರಿ ದತ್ತಾಂಶವು ಸ್ಕಾಲರ್‌ಶಿಪ್ ಪೋರ್ಟಲ್ (SSP), ಹಾಸ್ಟೆಲ್ ತಂತ್ರಾಂಶ (SHP, HIMS), Yuvandhi, Kutumba ಮುಂತಾಧ ತಂತ್ರಾಂಶಗಳಿಗೆ ಜೋಡಿಸಿರುವುದರಿಂದ, ವಿದ್ಯಾರ್ಥಿಗಳು ನೇರವಾಗಿ ಆಯಾ ಯೊಜನೆಗಳ ಫಲಾನುಭವಿಗಳಾಗುತ್ತಿದ್ದಾರೆ
13. ವಿದ್ಯಾರ್ಥಿಗಳ ಎಲ್ಲ ಸೆಮಿಸ್ಟರ್ ಫಲಿತಾಂಶಗಳನ್ನು ಭಾರತ ಸರ್ಕಾರವು ನಿರ್ವಹಿಸುತ್ತಿರುವ DigiLocker NAD ಮತ್ತು ABC id ಸರ್ವರ್‌ಗಳಿಗೆ ನೇರವಾಗಿ ಅಪ್ ಲೋಡ್ ಮಾಡಲಾಗುತ್ತಿದೆ.
14. ಸದರಿ ತಂತ್ರಾಂಶದಲ್ಲಿ ಅಂಕಪಟ್ಟಿಗಳನ್ನು ಸಾಮಾನ್ಯ A4 ಪೇಪರ್ ಆಥವಾ pre printed ಪೇಪರ್‌ನಲ್ಲಾದರೂ ಮುದ್ರಿಸಿ ವಿತರಿಸುವ ಅವಕಾಶ ಕಲ್ಪಿಸಲಾಗಿದೆ.

ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ UUCMS ತಂತ್ರಾಂಶದ ನಿರ್ವಹಣೆಯಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಕಾಲ ಕಾಲಕ್ಕೆ ಪರಿಹರಿಸಲು ಹಾಗೂ ವಿದ್ಯಾರ್ಥಿಗಳು UUCMS ನಲ್ಲಿ ಪ್ರವೇಶಾತಿ ಮಾಡುವಾಗ ಸಮಸ್ಯೆಗಳು ಎದುರಾದಲ್ಲಿ ಅವರಿಗೆ ಮಾರ್ಗದರ್ಶನ ನೀಡಲು UUCMS Helpdesk ವ್ಯವಸ್ಥೆ ಕಲ್ಪಿಸಲಾಗಿದೆ. ಇನ್ನು ಮುಂದೆಯೂ ಸಹ ವರದಿಯಾಗುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಕ್ರಮವಹಿಸಲಾಗುವುದು.

(ಡಾ.ಎಂ.ಸಿ ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಸಂಖ್ಯೆ: ಇಡಿ 66 ಅಅವಿ 2024